# ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು.

## ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದ ಸಮಗ್ರ ವರಧಿ.

ಮೈಸೂರು ಜಿಲ್ಲೆ, ತಿ. ನರಸಿಪುರ ತಾಲೂಕು, ವರುಣ ಹೋಬಳಿಯ ರಂಗಸಮುದ್ರ ಗ್ರಾಮದಲ್ಲಿ ದಿನಾಂಕ 21-08-2022 ರ ಭಾನುವಾರ ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು ಮತ್ತು ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಈ ಕಾರ್ಯಕ್ರಮದ ಭಾಗವಾಗಿ ನಮ್ಮ ಕಾಲೇಜಿನ ಅಂತಿಮ ವರ್ಷದ ಸುಮಾರು ನೂರ ನಲವತ್ತು ವಿದ್ಯಾರ್ಥಿಗಳು ರಂಗಸಮುದ್ರ ಗ್ರಾಮದಲ್ಲಿರುವ ಐದು ನೂರು ಮನೆಗಳಿಗೆ ಬೇಟಿ ನೀಡಿ ಮನೆ ಮನೆ ಸರ್ವೆ ಮಾಡಿದ್ದು, ಪ್ರತೀ ಮನೆಯಲ್ಲಿರುವ ಸದಸ್ಯರ ಸಂಖ್ಯೆ, ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾನದ ಗುರುತಿನ ಚೀಟಿ, ವೃದ್ದಾಪ್ಯ ವೇತನ ಮತ್ತು ವಿದವಾ ವೇತನ ಪಡೆಯದವರ ವಿವರ, ಶೌಚಾಲಯ ಹೊಂದಿಲ್ಲದ ಮನೆ ಮತ್ತು ಇನ್ನಿತರ ವಿವರಗಳನ್ನು ಪಡೆಯಲಾಯಿತು. ತದನಂತರ ಸುಮಾರು ಮಧ್ಯಾಹ್ನ 3-00 ಗಂಟೆಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಶ್ರೀ. ಮಹಾವೀರ್. ಮ. ಕರೆಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ತಿ. ನರಸಿಪುರ ಹಾಗೂ ಗೌರವ ಅಧ್ಯಕ್ಷರು, ತಾಲ್ಲೂಕು ಸೇವೆಗಳ ಸಮಿತಿ, ಇವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಕಾರ್ಯ ಮತ್ತು ಸಾರ್ವಜನಿಕರಿಗೆ ಹೇಗೆ ನೆರವನ್ನು ನೀಡುತ್ತದೆ, ಯಾರು ಈ ಸಮಿತಿಯಿಂದ ಪ್ರಯೋಜನವನ್ನು ಪಡೆಯಬಹುದು ಮತ್ತು ಕಾನೂನು ವಿದ್ಯಾರ್ಥಿಗಳ ಜವಬ್ದಾರಿಗಳೇನು ಎಂಬುದರ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ. ಚೇತನ್ ಅನ್ನದಾನಿ ಮಂಜುನಾಥ, ಪ್ರಧಾನ ಸಿವಿಲ್ ನ್ಯಾಯಾಧೀಶರು, ಜೆ.ಎಂ.ಎಫ್.ಸಿ ನ್ಯಾಯಾಲಯ ಹಾಗೂ ಗೌರವ ಕಾರ್ಯದರ್ಶಿಗಳು, ತಾಲ್ಲೂಕು ಸೇವಗಳ ಸಮಿತಿ, ತಿ. ನರಸಿಪುರ, ಇವರು ಮಾತನಾಡಿ ಕಾನೂನು ವಿದ್ಯಾರ್ಥಿಗಳು ಹಳ್ಳಿಯ ಜನರಿಗೆ ಕಾನೂನಿನ ಅರಿವನ್ನು ನೀಡಬೇಕು ಎಂಬುದನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಶ್ರೀ. ಮಾದಪ್ಪ, ಹಿರೀಯ ವಕೀಲರು, ವಕೀಲರ ಸಂಘ, ತಿ. ನರಸಿಪುರ ಇವರು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ಸಮಗ್ರವಾಗಿ ಉಪನ್ಯಾಸ ನೀಡಿದರು. ಮತ್ತೊಬ್ಬ ಸಂಪನ್ಮೂಲ ವ್ಯಾಕ್ತಿಗಳಾದ ಶ್ರೀಮತಿ. ಬಿ. ಸುಮಿತ್ರ , ಎಜಿಪಿ, ವಕೀಲರ ಸಂಘ, ತಿ. ನರಸಿಪುರ ಇವರು ಮಹಿಳೆಯರ ಆಸ್ತಿಯ ಹಕ್ಕು ಮತ್ತು ಹಿರಿಯ ನಾಗರಿಕರ ಹಕ್ಕು ಎಂಬ ವಿಷಯದ ಮೇಲೆ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ. ವೆಂಕಟೇಶ. ಕೆ.ಎನ್. ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ , ತಿ. ನರಸಿಪುರ, ಶ್ರೀ. ಶಿವಲಿಂಗಪ್ಪ, ಉಪಾಧ್ಯಕ್ಷರು, ಕಾಲೇಜು ವಿ.ವಿ.ಕಾ.ಕಾ. ಆಡಳಿತ ಮಂಡಳಿ ಮತ್ತು ಗ್ರಾಮಸ್ಥರು ಬಾಗವಹಿಸಿದ್ದರು. ಶ್ರಿ.ಮತಿ ದೀಪು, ಪ್ರಾಚಾರ್ಯರು, ವಿ.ವಿ. ಕಾನೂನು ಕಾಲೇಜು ಮೈಸೂರು, ಇವರು ಅಧ್ಯಕ್ಷೀಯ ಭಾಷಣ ಮಾಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಮನೆ ಮನೆ ಸರ್ವೆಯ ವರಧಿಯನ್ನು ಕಾರ್ಯಕ್ರಮದ ಸಂಯೊಜನಾಧಿಕಾರಿಗಳಾದ ಶ್ರೀ. ಶಿವಕುಮಾರ,

ಇವರು ಮಂಡಿಸಿದರು ಮತ್ತು ಅಂತಿಮವಾಗಿ ಎನ್.ಎಸ್. ಎಸ್. ಅಧಿಕಾರಿಗಳಾದಂತಹ ಶ್ರೀ ಪ್ರಶಾಂತ್ ರವರು ವಂದನಾರ್ಪಣೆ ಮಾಡಿದರು.




ನಮ್ಮ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳು ರಂಗಸಮುದ್ರಕ್ಕೆ ತೆರಳುವ ಮುನ್ನ ಕಾಲೇಜಿನ ಮುಂದೆ ಎಲ್ಲರೂ ಸಿದ್ಧವಾಗಿ ನಿಂತಿರುವುದು.




ಶ್ರೀ. ಮಹಾವೀರ್. ಮ. ಕರೆಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ತಿ. ನರಸಿಪುರ ಇವರು ಸಭೆಯನ್ನು ಕುರಿತು ಮಾತನಾಡುತ್ತಿರುವುದು.



ವಿದ್ಯಾರ್ಥಿಗಳು ಮನೆಯ ಮುಖ್ಯಸ್ಥರಿಂದ ಅಗತ್ಯ ಮಾಹಿತಿಯನ್ನು ಪಡೆಯುತ್ತಿರುವುದು.

## Legal Aid and Legal Literacy Programme Report which was held at Rangasamudra.

One day Legal Aid and Legal Literacy programme was organized by Vidyawardaka Law College, Mysore and Taluk Legal Services Committee, Teenarasipura on Sunday 21-08-2022 at Rangasamudra Village, Varuna Hobli, Teenarasipur Taluk. As a part of this program, about one hundred and forty final year students of our college visited five hundred houses in Rangasamudra village and conducted a house to house survey about the number of members in each house, Aadhaar card, Ration card, Voter ID card, details of those who do not get old age pension and widow pension, house without toilet and Other details were obtained. Then at around 3-00 PM Legal Aid and Legal Literacy stage programme program has been inuagurated by Shri. Mahavir. m. Karennavara, Senior Civil Judge and J.M.F.C, Teenarasipura and President, Taluk Services Committee, who inaugurated the program and addressed the program, gave comprehensive information about the work of Taluk Legal Services Committee and how it helps the public, who can benefit from this committee and what are the responsibilities of law students.

Mr. Chetan Annadani Manjunatha, Principal Civil Judge, JMFC, Teenarasipura and Secretary, Taluk Legal Services Committee, he spoke how the law students should make the people of the village aware of the law.

Mr. Madappa, Senior Advocate, Bar Association, Teenarasipura participated as resource person of the program and gave a comprehensive lecture on civil and criminal cases and proceedings. Another resource persons Smt. B. Sumitra, AGP, Bar Association, Teenarasipura who delivered a lecture on Women's Right to Property and Rights of Senior Citizens. In the program Mr. Venkatesh. K.N. Additional Civil Judge, J.M.F.C., Teenarasipura, Mr. Sivalingappa, Vice President, College V.V.Ka.Ka and the villagers participated. Smt. P. Deeu, , Principal, V.V.L.C, Mysore delivered the Presidential Address. At the beginning of the program, Mr. Shivakumara, Co-ordinator, Legal Aid and Legal Literacy Cell. finally the programme has been concluded by vote of thanks by T.M Prashanth.




All the final year students of our college are standing ready in front of the college before going to Rangasamudra.




Sri. Mahavir M. Karennavara, Senior Civil Judge and J.M.F.C., Teenarasipura is talking about Legal Services Committee.

